

## ಕಳೆದ ಸಂಚಿಕೆಯಲ್ಲಿ...

ರಿತಿಕ್–ಸುಗಂಧಾ ಒಂದೇ ಮನೆಯಲ್ಲಿ, ಅದೂ ಮದುವೆಯಾಗದೆ ಒಟ್ಟಿಗೆ ವಾಸ ಇರುವುದರ ಬಗ್ಗೆ ಮನೆಯ ಮಾಲೀಕ ಆಕ್ಷೇಪ ವ್ಯಕ್ತಪಡಿಸಿ ಸಮಾಜದ ಹಿತದೃಷ್ಟಿಯಿಂದ ಇಬ್ಬರೂ ಮದುವೆಯಾಗಬೇಕು ಎಂದು ಹೇಳುತ್ತಾನೆ. ಇದು ರಿತಿಕ್‌ಗೆ ಸರಿಕಾಣುವುದಿಲ್ಲ. ರಿತಿಕ್ ಮಹಿಳೆಯರ ಪುಕ್ಕಲುತನದ ಬಗ್ಗೆ ಮಾತನಾಡಿದಾಗ ಸುಗಂಧಾ ಅದನ್ನು ವಿರೋಧಿಸುತ್ತಾಳೆ. ಮಹಿಳಾ ಸ್ವಾತಂತ್ರ್ಯದ ಬಗ್ಗೆ ಇಬ್ಬರೂ ಚರ್ಚೆ ನಡೆಸುತ್ತಾರೆ.

ಬಳಿಕ ಇಬ್ಬರೂ ಹೋಟೆಲ್‌ನಲ್ಲಿ ಊಟ ಮಾಡಿ ದೇಶದ ಭ್ರಷ್ಟಾಚಾರದ ಬಗ್ಗೆ, ರೋಮಾನ್ಸ್ ಬಗ್ಗೆ ಮಾತುಕತೆ ನಡೆಸುತ್ತಾರೆ. ಜೊತೆಗೆ ಸಲ್ಲಾಪ, ಪ್ರಣಯ, ಮಿಲನದಲ್ಲೂ ಖುಷಿ ಅನುಭವಿಸುತ್ತಾರೆ. ಸುಗಂಧಾಗೆ ಈಗ ಗರ್ಭಧಾರಣೆ ಭಯ ಕಾಡುತ್ತದೆ. ರಿತಿಕ್‌ಗೆ ತಿಳಿಸಿದಾಗ ಆತ ವೈದ್ಯರನ್ನು ಸಂಪರ್ಕಿಸಿ ಕಾಪರ್–ಟಿ ಬಳಸುವ ಬಗ್ಗೆ ಸಲಹೆ ನೀಡುತ್ತಾರೆ. ಈ ನಿರ್ಧಾರಕ್ಕೆ ಸುಗಂಧಾ ಬದ್ಧಳಾಗುತ್ತಾಳೆ.

ಸಮಾನ ಪಾಲುದಾರರಾಗಿದ್ದೆವು.

ನೋಂದಣಿಯ ದಿನ ಶಿವಾ ಮತ್ತು ಪ್ರೇರಣಾ ಸಾಕ್ಷಿಗಳಾಗಿ ಬಂದಿದ್ದರು. ನನಗೆ ಕೋರ್ಟ್ ಪರಿಸರ ಒಂದು ಮೀನಿನ ಸಂತೆಯಂತೆ ಕಾಣಬರುತ್ತಿತ್ತು. ವಕೀಲರುಗಳ ಕಾಂತಿಯುಕ್ತ ಮುಖಗಳು ಮತ್ತು ವಾದಿಪ್ರತಿವಾದಿಗಳ ಅಸಹಾಯಕ ಮುಖಗಳು ಭಯವನ್ನು ಹುಟ್ಟಿಸುವಂತಿದ್ದವು. ಅಲ್ಲಿ ಮಹಿಳಾ ವಕೀಲರು ಸಹ ಇದ್ದರು. ಅವರನ್ನು ಕಪ್ಪು ಕೋಟಿನಲ್ಲಿ ಪ್ರತ್ಯೇಕವಾಗಿ ಗುರುತಿಸಬಹುದಿತ್ತು. ಈ ಮಹಿಳಾ ವಕೀಲರು ಸಹ ಪುರುಷ ವಕೀಲರಂತೆ ತಮ್ಮ ಕಕ್ಷಿದಾರರನ್ನು ಕಾನೂನಿನ ಕೂಟಯುಕ್ತಿಯಲ್ಲಿ ಸಿಲುಕಿಸುವರೇ? ನನ್ನ ಮನಸ್ಸಿನಲ್ಲಿ ಇಂಥ ಪ್ರಶ್ನೆ ಉದ್ಭವಿಸಿತು. ಅವರಲ್ಲಿ ಕೆಲವರು ಸುಂದರವಾಗಿದ್ದು, ಚುರುಕಾಗಿದ್ದರು; ಇನ್ನು ಕೆಲವರನ್ನು ನೋಡಿದಾಗ, ಅವರು ಕೋರ್ಟಿನಲ್ಲಿ ವಾದಿಸುವ ಸಾಮರ್ಥ್ಯವನ್ನು ಹೊಂದಿರುವರೋ ಇಲ್ಲವೋ ಎಂಬ ಸಂದೇಹ ಮೂಡುತ್ತಿತ್ತು. ವಾಚಾಳಿಯಾಗುವುದು ಮತ್ತು ವಿಷಯದ ಬಗ್ಗೆ ಚರ್ಚಿಸುವುದು ಬೇರೆ ಬೇರೆ ಸಂಗತಿಗಳಾಗಿವೆ.

ಕಂಪ್ಯೂಟರ್ ಯುಗದಲ್ಲೂ ಹಳೆ ಟೈಪರೇಟರ್ಸ್‌ನಲ್ಲಿ ಖಟರ್‌ಖಟರ್ ಸದ್ದಿನೊಂದಿಗೆ, ಪತ್ರಗಳನ್ನು ಬರೆಯುವವರು ತಲ್ಲೀನರಾಗಿದ್ದರು. ಅಲ್ಲಿ ಏನೋ ಒಂದು ವಿಧದ ಕೋಲಾಹಲ ಮತ್ತು ಜಗ್ಗಾಟದ ವಾತಾವರಣವಿತ್ತು. ಪಾಮ್ ಗಿಡಗಳ ಸೌಂದರ್ಯವನ್ನು ಸವಿಯುವ ಬಿಡುವು ಯಾರಿಗೂ ಇರಲಿಲ್ಲ.

ನನಗೆ ಒಂದೇ ಸಮನೆ ಅಮ್ಮನ ನೆನಪಾಗುತ್ತಿತ್ತು. ಅಮ್ಮ ಸಹ ಕೋರ್ಟಿಗೆ ಹೋಗಬೇಕಾಗಿತ್ತು. ಅವರು ಮತ್ತು ಅಪ್ಪ ಇಬ್ಬರೂ ವಿಚ್ಛೇದನವನ್ನು ಬಯಸುತ್ತಿದ್ದರು. ವಿಚ್ಛೇದನ ಗಂಡಹೆಂಡತಿಗೆ ಒಪ್ಪಿಗೆಯಿತ್ತು, ಆದರೆ ಇಬ್ಬರ ಕುಟುಂಬದವರಿಗೆ ಒಪ್ಪಿಗೆಯಿರಲಿಲ್ಲ. ಅವರು ವಿಚ್ಛೇದನವಾಗಲು ಬಿಡದೆ ಒಪ್ಪಂದ ಮಾಡಿಸಿದರು. ಆದರೆ ಅಮ್ಮ ಕೋರ್ಟಿಗೆ ಹೋಗಿದ್ದರಲ್ಲ! ಅಲ್ಲಿ ಸಹ ಸುಮಾರಾಗಿ ಇದೇ ವಾತಾವರಣ ಇದ್ದಿರಬಹುದು. ನಾನಿಲ್ಲಿಗೆ ರಿತಿಕ್‌ನೊಂದಿಗೆ ಬಂದಿದ್ದೇನೆ. ನಮ್ಮ ಹೆಸರಿಗೆ ಮನೆಯ ನೋಂದಣಿಯನ್ನು ಮಾಡಿಸಿಕೊಳ್ಳಬೇಗಿತ್ತು; ಆದರೆ ಅಮ್ಮ ಅಲ್ಲಿಗೆ ಒಂಟಿಯಾಗಿ ಹೋಗಿದ್ದರೇನೋ. ಆಗ ಅವರು ಅಲ್ಲಿ ಅದೆಷ್ಟು ಒಂಟಿತನವನ್ನು ಅನುಭವಿಸಿರಬೇಕು! ನಾನು ಮನಸ್ಸಿನಲ್ಲಿಯೇ ಕಂಪಿಸಿದೆ. ಅಮ್ಮನ ಬಗ್ಗೆ ಯೋಚಿಸಿ ಮನಸ್ಸು ಬೇಸರಗೊಂಡಿತ್ತು. ಅಮ್ಮ ನನಗೆ ತಿಳಿ ಹೇಳಲು ಬಂದಾಗ, ನಾನು ಅವರೊಂದಿಗೆ ಅಷ್ಟು ಒರಟಾಗಿ ಮತ್ತು ಅಶಿಷ್ಟವಾಗಿ ವರ್ತಿಸಬಾರದಿತ್ತು. ಅಮ್ಮ ಅದೆಷ್ಟು ಬೇಸರದಿಂದ ಹೊರಟು ಹೋಗಿದ್ದಳು.

'ನಿಮ್ಮಿಬ್ಬರ ಜಂಟಿ ಖಾತೆಯಲ್ಲಿ ನೋಂದಣಿಯಾಗ ಬೇಕು?' ನೋಟರಿಯವರು ಕೇಳಿದ್ದರು. ನಾವು ನೋಟರಿಯವರ ಬಳಿಗೆ ಹೋದಾಗ, ಅಲ್ಲಿ ಅವರಿರಲಿಲ್ಲ. ಅವರ ಕೆಳಗಿನವರೊಬ್ಬರು, ನೋಟರಿಯವರು ಗುಮಾಸ್ತರೊಬ್ಬರ ಬಳಿಗೆ ಹೋಗಿದ್ದಾರೆ, ಇನ್ನೇನು ಬರಬಹುದು ಎಂದಿದ್ದರು. ಆದರೆ ಅವರು ಐವತ್ತು ನಿಮಿಷಗಳು ತಡವಾಗಿ ಬಂದರು. ಬಂದಾಗ ಅವರು ಯಾವುದೇ ವಿಷಾದವನ್ನು ವ್ಯಕ್ತಪಡಿಸಲಿಲ್ಲ, ಉತ್ಸಾಹವನ್ನು ಸಹ ತೋರಲಿಲ್ಲ. ನಮ್ಮ ಬಗ್ಗೆ ಅವರ ಈ ವರ್ತನೆ ನನ್ನ ದೃಷ್ಟಿಯಲ್ಲಿ ಅನುಚಿತವಾಗಿತ್ತು, ಆದರೆ ಅವರ ದೃಷ್ಟಿಯಲ್ಲಿ ಇದು ವಿಚಾರಣೆಗೆ ಯೋಗ್ಯವೇ ಆಗಿರಲಿಲ್ಲ. ವೈದ್ಯರ ಬಳಿಗೆ ನಿತ್ಯ ಅನೇಕ ರೋಗಿಗಳು ಬರುವಂತಿತ್ತು ಅವರ ನೋಟ. ಅಂಥ ವೈದ್ಯರು ರೋಗಿಗಳ ಭಾವನೆಗಳ ಬಗ್ಗೆ ನಿರ್ಲಿಪ್ತರಾಗಿರುತ್ತಾರೆ. ರೋಗಿ ತನ್ನ ಬಳಿಗಲ್ಲದೆ ಬೇರೆಲ್ಲಿಗೆ ಹೋಗುತ್ತಾರೆ ಎಂಬುದು ಅವರಿಗೆ ತಿಳಿದಿರುತ್ತದೆ. ರೋಗಿ ಒಬ್ಬರಲ್ಲ ಒಬ್ಬರು ವೈದ್ಯರ ಬಳಿಗೆ ಹೋಗಲೇಬೇಕಲ್ಲ! ಅದೇ ರೀತಿಯಲ್ಲಿ ನಾವು ಆ ನೋಟರಿ ಅಲ್ಲದಿದ್ದರೆ, ಇನ್ನೊಬ್ಬರು ನೋಟರಿಯವರ ಬಳಿಗೆ ಹೋಗಬೇಕಿತ್ತಲ್ಲ!

ಕೋರ್ಟ್ ಪರಿಸರದಲ್ಲಿ ನೋಟರಿಯವರು ಪತ್ರಗಳನ್ನು ಸಿದ್ಧಪಡಿಸುತ್ತಿರುವಾಗ, ಅವರು ರಿತಿಕ್‌ನನ್ನು ಕೇಳಿದ್ದರು, 'ನಿಮ್ಮಿಬ್ಬರ ವೈಯಕ್ತಿಕ ಸಂಬಂಧವೇನು? ಇವರು ನಿಮಗೇನಾಗಬೇಕಿದೆ?'

'ನನ್ನ ವೈಫ್', ಕ್ಷಣಮಾತ್ರದ ಹಿಂಜರಿಕೆಯ ನಂತರ ರಿತಿಕ್ ಹೇಳಿದ್ದ.

'ನಿಮ್ಮ ಹೆಸರು?' ಅವರು ರಿತಿಕ್‌ನನ್ನು ಮತ್ತೆ ಕೇಳಿದ್ದರು.

'ರಿತಿಕ್ ಶರ್ಮಾ.'

'ಇವರ ಹೆಸರು?'

'ಸುಗಂಧಾ ಪರಮಾರ್.'

'ಸುಗಂಧಾ ಪರಮಾರ್? ಆದ್ರೆ ಇವರು ನಿಮ್ಮ ವೈಫ್ ಅಲ್ವಾ?' ನೋಟರಿ ಪ್ರಶ್ನಿಸಿದರು.

'ಹೌದು, ಆದ್ರೆ ಇವರು ತಮ್ಮ ತವರಿನ ಸರ್‌ನೇಮ್ ಇಟ್ಕೊಂಡಿದ್ದಾರೆ.'

'ಓಹೋ, ನೀವು ಶರ್ಮಾ, ಇವರು ಪರಮಾರ್. ಬ್ರಾಹ್ಮಣ ಮತ್ತು ಠಾಕೂರರ ಜೋಡಿ! ಆದ್ರೆ ಈಗ ಇವರು ನಿಮ್ಮ ಸರ್‌ನೇಮ್ ಇಟ್ಕೋಬೇಕಾಗುತ್ತೆ. ಇಲ್ಲದಿದ್ರೆ ಮುಂದೆ ಕಾನೂನು ಜಂಜಾಟದಲ್ಲಿ ಸಿಲುಕಿಕೊಳ್ಳಬಹುದು. ನೀವು ಹೇಳಿದರೆ, ನಾನು ನಿಮ್ಮ ಮದುವೆಯ ಆಧಾರದಲ್ಲಿ ಅಫಿಡವಿಟ್ ಮಾಡಿಸುತ್ತೇನೆ', ಅವರಿಗೆ ಇನ್ನೊಂದು ಕೆಲಸ ಸಿಗುವಂತೆ ಕಂಡಿತು.

'ಸರಿ, ಆದ್ರೆ ಈಗ ಈ ನೋಂದಣಿಯನ್ನು ಇದೇ ಹೆಸರಿನಲ್ಲಿ ಮಾಡಿ', ರಿತಿಕ್ ವಿನಯದಿಂದ ಹೇಳಿದ. ಆ ಕ್ಷಣ ರಿತಿಕ್‌ನ ಮನಸ್ಸಿನಲ್ಲಿ ನೋಟರಿಯವರ ಬಗ್ಗೆ ಸಿಟ್ಟು ಮನೆ ಮಾಡುತ್ತಿದೆ ಎಂಬುದು ನನಗೆ ತಿಳಿದಿತ್ತು.

'ಒಂದ್ ಕೆಲಸ ಮಾಡೋಣ, ಇದರಲ್ಲಿ ಸುಗಂಧಾ ಪತ್ನಿ, ರಿತಿಕ್ ಶರ್ಮಾ ಅಂತ ಬರೀತೀನಿ. ಸರ್‌ನೇಮಿನ ರಗಳೆಯೇ ಬೇಡ. ನೀವು ಇವರ ಸರ್‌ನೇಮ್ ಬದಲಾಯಿಸುವಾಗ ರಿಜಿಸ್ಟ್ರೇಷನ್ ಪತ್ರದಲ್ಲಿ ಸುಧಾರಣೆ ಮಾಡುವ ಅಗತ್ಯ ಇಲ್ಲ', ನೋಟರಿ ಅವರು ಸಲಹೆಯಿತ್ತರು.

'ಹೂಂ, ಇದು ಸರಿ', ರಿತಿಕ್‌ಗೆ ನೋಟರಿಯವರ ಸಲಹೆ ತರ್ಕಯುಕ್ತವಾಗಿದೆ ಎಂದು ತೋರಿತು. ನನಗೂ ಇದೇ ಸರಿ ಎಂದು ಅನ್ನಿಸಿತು.

'ಸುಗಂಧಾ ಪತ್ನಿ, ರಿತಿಕ್ ಶರ್ಮಾ ಸನ್ ಆಫ್...' ಎಂದು ನೋಟರಿಯವರು ಬರೆದರು.

'ಶ್ರೀಮತಿ ಎಂದು ಬರೆಯಲೇಬೇಕೆ? ಇತ್ತೀಚಿನ ದಿನಗಳಲ್ಲಿ ಸುಶ್ರೀ ಎಂದು ಬರೆಯಲಾಗುತ್ತದೆ', ನೋಟರಿಯವರು ನನ್ನ ಹೆಸರಿನೊಂದಿಗೆ 'ಶ್ರೀಮತಿ' ಶಬ್ದವನ್ನು ಬರೆದಿದ್ದರು, ಹೀಗಾಗಿ ರಿತಿಕ್ ನೋಟರಿಯವರನ್ನು ಕೇಳಿದ್ದ.

'ಇವರು ನಿಮ್ಮ ಶ್ರೀಮತಿ ತಾನೇ? ಅಲ್ಲದೆ ಕಾನೂನು ವಿಚಾರದಲ್ಲಿ ಎಲ್ಲವೂ ಸರಿಯಾಗಿರ ಬೇಕು, ಇಲ್ಲದಿದ್ರೆ ಆಮೇಲೆ ತುಂಬಾ ಸಮಸ್ಯೆ ಯಾಗುತ್ತೆ', ನೋಟರಿಯವರು ಜಾಣತನವನ್ನು ಪ್ರದರ್ಶಿಸಿದ್ದರು. ರಿತಿಕ್ ಮತ್ತು ನಾನು ಇಬ್ಬರು ಮೌನವಾಗಿದ್ದೆವು. ಅಂದಿನಿಂದ ನಾವಿಬ್ಬರು ಸಮಾಜದ ದೃಷ್ಟಿಯಲ್ಲಿ ಗಂಡಹೆಂಡತಿಯಾಗಿರ ದಿದ್ದರೂ, ಮನೆಯ ಪತ್ರಗಳಲ್ಲಿ ಗಂಡಹೆಂಡತಿ ಯಾಗಿದ್ದೆವು. ನನಗೆ ತುಂಬಾ ವಿಚಿತ್ರವೆಂದು ಅನ್ನಿಸು ತ್ತಿತು. ನಾವು ಬದುಕುವ ಹೊಸ ವಿಧಾನವನ್ನು ಅನುಸರಿಸಿದಾಗ, ಅದರಂತೆ ಕಾನೂನು ಸಹ ಆಗುತ್ತಿರ ಬೇಕು. ಆದರೆ ಕಾನೂನು ಸಹ ಒಂದು ಬಂಧನ, ಮನುಷ್ಯರಾದ ನಾವೇಕೆ ಬಂಧನಗಳಿಲ್ಲದೆ ಇರಲು ಸಾಧ್ಯವಿಲ್ಲ? ಆಗ ನನಗೆ ಮಹಾನ್ ದಾರ್ಶನಿಕ ರೂಸೋ ಅವರ, 'ನಾವು ಸ್ವತಂತ್ರವಾಗಿ ಜನಿಸುತ್ತೇವೆ, ಆದರೆ ನಂತರ ಎಲ್ಲೆಡೆಯಲ್ಲಿ ಸರಪಳಿಗಳಿಂದ ಬಂಧಿಸಲ್ಪಟ್ಟಿರುತ್ತೇವೆ' ಎಂಬ ಮಾತು ನೆನಪಾಯಿತು.

(ಸಶೇಷ)